ಹೀಗೆಂದು ಕಿನ್ನರೀ ಬೊಮ್ಮಣ್ಣಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ.

ಜಂಗಮದಿಂಗಿತಾಕಾರವ ನೋಡಿ, ಲಿಂಗವೆಂದರಿವ ಸದ್ಭಕ್ತರು ಮನ ಮನ ಬೆರಸಿದ ಕೂರ್ಮನ ಶಿಶುವಿನ ಸ್ನೇಹದಂತೆ ಕಾಣದ ಪುನ್ನಪೆ ತೆರಹಿಲ್ಲದಿರಬೇಕು ನೋಡಾ. ಬಂದ ಬರವನರಿಯದೆ ನಿಂದ ನಿಲವನರಿಯದೆ ಕೆಮ್ಮನೆ ಅಹಂಕಾರವ ಹೊತ್ತಿಪ್ಪವರ ನಮ್ಮ ಗುಹೇಶ್ವರಲಿಂಗನೊಲ್ಲ ಕಾಣಾ ಕಿನ್ನರಿ ಬೊಮ್ಮಣ್ಣ ||೪೮||

ಹೀಗೆಂದು ಪ್ರಭುದೇವರು ಕಿನ್ನರಿ ಬೊಮ್ಮಣ್ಣಗಳೊಡನೆ ನಿರೂಪಿಸಲು, ಇದಕ್ಕೆ ಬಸವರಾಜದೇವರು ಕಿಂಕುರ್ವಾಣ ಭಾವದಿಂದೆ ಬಿನ್ನೈಸಿದ ಪ್ರಸ್ತಾಪದ ವಚನ.

ಸತ್ಯ ಸದಾಚಾರ ಸಂಬಂಧವಾದ ಭೃತ್ಯಾಚಾರ ಎನಗಿಲ್ಲವಯ್ಯಾ! ಆನು ನಿಮ್ಮ ನೆನೆಯಲು ಎನಗೆ ಭಕ್ತಿ ಇಲ್ಲವಯ್ಯಾ! ಕರುಣದಿಂದೆ ಕೃಪೆ ಮಾಡಾ ಕೂಡಲಸಂಗಮದೇವಾ ||೪೯||

ಎನ್ನ ಅಹಂಕಾರದ ಅವಗುಣವ ಕಳೆದು, ಕೃತಾರ್ಥನ ಮಾಡೆಂದು ಬಿನ್ನಹಮಂ ಮಾಡುವ ಪ್ರಸ್ತಾವದ ವಚನ.

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ! ಒರೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ. ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹಯ್ಯಾ ಕೂಡಲಸಂಗಮದೇವಯ್ಯಾ ||೫೦||

ಹೀಗೆಂದು ಬಸವರಾಜದೇವರು ಬಿನ್ನವಿಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ತನುವಿನಲ್ಲಿ ತನು ಸವೆದು, ಮನದಲ್ಲಿ ಮನ ಸವೆದು, ಧನದಲ್ಲಿ ಧನ ಸವೆದು, ಭಕ್ತಿ ಯುಕ್ತಿಯ ಮಾತು ನಿನಗೇಕೆ ಬಸವ? ಮಾಟಕೂಟವೆಂಬ ಕೀರ್ತಿಗೆ ಸಿಲ್ಕಿ ಜಂಗಮವೆ ಲಿಂಗವೆಂಬುದ ಮರೆದೆಯಲ್ಲ ಬಸವ! ಗುಹೇಶ್ವರನ ಶರಣರಿಂಗೆ ತ್ರಿಕರಣವನೊಪ್ಪಿಸಿದಲ್ಲದೆ, ಭಕ್ತನಾಗಬಾರದು ಕಾಣಾ ಸಂಗನಬಸವಣ್ಣಾ ||೫೧||

ಹೀಗೆಂದು ಪ್ರಭುದೇವರು ನಿರೂಪಿಸಲು, ಬಸವರಾಜದೇವರು ತನು, ಮನ, ಧನಂಗಳನು ವಂಚನೆ ಇಲ್ಲದೆ ನಿಮಗರ್ಪಿಸಿದೆನೆಂಬ ಪ್ರಸ್ತಾವದ ವಚನ.

